ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಕೊಟ್ಟಿರತಕ್ಕಂಥ ಹಣ 15ಲಕ್ಷ ರೂಪಾಯಿಗಳು ಈಚೆಗೆ ಆರು ಲಕ್ಷ ಹಣವನ್ನು ಕೊಟ್ಟಿದ್ದಾರೆ. ಈ ಎರಡು ಜಿಲ್ಲೆಗಳಿಗೆ ಇಷ್ಟೊಂದು ದೊಡ್ಡ ಪ್ರಮಾಣದ ಹಣ ವೆಚ್ಚ ಮಾಡಿದ್ದಾರೆ. ಆದರೆ ನಾವು ಗುರಿ ಮುಟ್ಟುತ್ತೇವೆ ಅಂತ ಹೇಳತಕ್ಕಂಥದ್ದರ ಬದಲಾಗಿ ಟ್ಯೂನ್ ಅಪ್ ಮಾಡತಕ್ಕಂಥಕ್ಕೆ K.H.B ಅಸಮರ್ಥ ಆಗಿದೆಯೋ ಅಥವಾ ಡಿ.ಸಿ.ಯವರಿಗೆ ಶಕ್ತಿ ಇಲ್ಲವೇ? ಏತಕ್ಕೆ ಇಷ್ಟು ಕಡಿಮೆ ಮಟ್ಟದ ಪ್ರೋಗ್ರೆಸ್ ಮಾಡಿದ್ದಾರೆ ಎಂದು ದಯವಿಟ್ಟು ಇದನ್ನು ಸ್ಪಷ್ಟಪಡಿಸುತ್ತೀರಾ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ನನಗೆ ಅಡ್‌ವೈಸ್ ಮಾಡಿದ್ದಾರೆ. ನಾನು ಸುಮಾರು 16 ಜಿಲ್ಲೆಗಳ ಜಿಲ್ಲಾಧಿಕಾರಿಗಳ, ಶಾಸಕರುಗಳ ಸಭೆಯನ್ನು ಕರೆದು ಅಲ್ಲಿಯ ಪ್ರೋಗ್ರೆಸ್ ಬಗ್ಗೆ ವಿಚಾರ ಮಾಡಿದ್ದೇನೆ. ಅಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಆದೇಶ ಕೊಡುತ್ತಿದ್ದೇನೆ. ನಾನು ಸುಮ್ಮನೆ ಕುಳಿತಿಲ್ಲ ಎಂಬುದನ್ನು ಅವರು ಗಮನಕ್ಕೆ ತರಬಯಸುತ್ತೇನೆ. ಕೆ.ಹೆಚ್.ಬಿ. ಮತ್ತು ಡಿ.ಸಿ.ಯವರಲ್ಲಿ ಹಣ ಏನು ಉಳಿದಿದೆ ಆ ಹಣವನ್ನು ಏಕೆ ಖರ್ಚು ಮಾಡುತ್ತಿಲ್ಲ ಎಂದು ನಮ್ಮ ಶ್ರೀ ಪುಟ್ಟಸ್ವಾಮಿ ಗೌಡರು ಪ್ರಶ್ನೆ ಕೇಳಿದರು. ನಾನು ಅವರ ಗಮನಕ್ಕೆ ತರುವುದೇನೆಂದರೆ ಟಾಸ್ಕ್ ಫೋರ್ಸ್ ಕಮಿಟಿಯವರಿಗೆ ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿ ಮಾಡುವ ಅಧಿಕಾರವನ್ನು ಸಂಪೂರ್ಣವಾಗಿ ಕೊಟ್ಟಿದ್ದೇವೆ. ಆ ಅಧಿಕಾರವನ್ನು ಚಲಾಯಿಸಿ ಯಾವ ಯಾವ ಡಿ.ಸಿ.ಆಗಲಿ ಬೇರೆ ಯಾರೇ ಆಡಳಿತಾಧಿಕಾರಿಗಳಾಗಲಿ ಅವರ ಬೆನ್ನ ಹತ್ತಿ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಇಲ್ಲವೇ ಅವರ ಮೇಲೆ ದೂರು ಕೊಟ್ಟರೆ ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಹಂಚಲಾದ ನಿವೇಶಗಳ ಸಂಖ್ಯೆ

420 - ಶ್ರೀ ಆರ್.ಎನ್.ನಾಯಕ್ (ಭಟ್ಕಳ) ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಈ ತನಕ ಎಷ್ಟು ಆಶ್ರಯ ನಿವೇಶನಗಳನ್ನು ಒದಗಿಸಲಾಗಿದೆ.

ಆ) ಅವುಗಳಲ್ಲಿ ಅರಣ್ಯ ಭೂಮಿಯಲ್ಲಿ ಎಷ್ಟು ನಿವೇಶನಗಳನ್ನು ಒದಗಿಸಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು)?

ಇ) ಅರಣ್ಯ ಭೂಮಿಯಲ್ಲಿ ಒದಗಿಸಿದ ನಿವೇಶನಗಳನ್ನು ರದ್ದುಪಡಿಸಲಾಗಿಯೇ

ಈ) ಅಂತ ಎಷ್ಟು ನಿವೇಶನಗಳಲ್ಲಿ ಆಶ್ರಯ ಮನೆಗಳನ್ನು ಕಟ್ಟಿಸಲಾಗಿದೆ(ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ರಾಜ್ಯದಲ್ಲಿ ಈತನಕ ಆಶ್ರಯ ಯೋಜನೆಯಡಿಯಲ್ಲಿ ಒಟ್ಟು 5,86,580 ನಿವೇಶನಗಳನ್ನು ಹಂಚಲಾಗಿದೆ.

ಆ) ಅರಣ್ಯ ಭೂಮಿಯಲ್ಲಿ 17095 ನಿವೇಶನಗಳನ್ನು ಒದಗಿಸಲಾಗಿದೆ.

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಿದೆ)

ಇ) ಹೌದು, ಬೆಂಗಳೂರು (ನಗರ) ಜಿಲ್ಲೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಗೊಟ್ಟಿಗೆರೆ ಗ್ರಾಮದ ಸ.ನಂ. 109 ಮತ್ತು 110 ರಲ್ಲಿ 228 ನಿವೇಶನಗಳನ್ನು ಕೊಟ್ಟಿದ್ದು, ಸದರಿ ನಿವೇಶನಗಳನ್ನು ಜಿಲ್ಲಾಧಿಕಾರಿಗಳು ರದ್ದುಪಡಿಸಿದ್ದಾರೆ

ಈ) ಯಾವುದೂ ಪೂರ್ಣವಾಗಿಲ್ಲ, ಆದರೆ 1177 ನಿವೇಶನಗಳಲ್ಲಿ ಕಾಮಗಾರಿ ನಡೆಯುತ್ತಿದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-ಆ) ನಲ್ಲಿ ಲಗತ್ತಿಸಿದೆ)

ಅನುಬಂಧ - ಅ

ಕ್ರಮ ಸಂಖ್ಯೆ.	ಜಿಲ್ಲೆಯ ಹೆಸರು	ಅರಣ್ಯ ಭೂಮಿಯಲ್ಲಿ ಹಂಚಿರುವ	ನಿವೇಶನ ವಿವರ
1.	ಚಿಕ್ಕಮಗಳೂರು	-	ಇಲ್ಲ -
2.	ಕೊಡಗು	-	ಇಲ್ಲ -
3.	ತುಮಕೂರು	-	ಇಲ್ಲ -
4.	ಮಂಗಳೂರು	-	ಇಲ್ಲ -
5.	ಬೀದರ್	-	ಇಲ್ಲ -
6.	ಬೆಳಗಾಂ	90	
7.	ಕಾರವಾರ	12155	
8.	ಗುಲ್ಬರ್ಗ	-	ಇಲ್ಲ -
9.	ರಾಯಚೂರು	-	ಇಲ್ಲ -
10.	ಬಳ್ಳಾರಿ	205	
11.	ಚಿತ್ರದುರ್ಗ	-	ಇಲ್ಲ -
12.	ಬಿಜಾಪುರ	-	ಇಲ್ಲ -
13.	ಕೋಲಾರ	-	ಇಲ್ಲ -
14.	ಮೈಸೂರು	-	ಇಲ್ಲ -
15.	ಬೆಂಗಳೂರು (ನಗರ)	228	
16.	ಬೆಂಗಳೂರು (ಗ್ರಾಮಾಂತರ)	160	
17.	ಹಾಸನ	-	ಇಲ್ಲ -
18.	ಮಂಡ್ಯ	-	ಇಲ್ಲ -
19.	ಧಾರವಾಡ	-	ಇಲ್ಲ -
20.	ಶಿವಮೊಗ್ಗ	4257	
	ಒಟ್ಟು	17095	

ಅನುಬಂಧ -ಆ

ನಿವೇಶನಗಳಲ್ಲಿ ಆಶ್ರಯ ಮನೆ ಕಟ್ಟಿಸಿರುವ ವಿವರ

ಕ್ರಮ ಸಂ.	ಜಿಲ್ಲೆಯ ಹೆಸರು	ಅರಣ್ಯ ಭೂಮಿಯಲ್ಲಿ ಹಂಚಿರುವ	ನಿವೇಶನ ವಿವರ
1.	ಚಿಕ್ಕಮಗಳೂರು	-	ಇಲ್ಲ -
2.	ಕೊಡಗು	-	ಇಲ್ಲ -
3.	ತುಮಕೂರು	-	ಇಲ್ಲ -
4.	ಮಂಗಳೂ	-	ಇಲ್ಲ -
5.	ಬೀದರ್	-	ಇಲ್ಲ -
6.	ಬೆಳಗಾವಿ	-	ಇಲ್ಲ -
7.	ಕಾರವಾರ	-	ಇಲ್ಲ -

8. ಗುಲ್ಬರ್ಗಾ	- ಇಲ್ಲ -
9. ರಾಯಚೂರು	- ಇಲ್ಲ -
10. ಬಳ್ಳಾರಿ	- ಇಲ್ಲ -
11. ಚಿತ್ರದುರ್ಗ	- ಇಲ್ಲ -
12. ಬಿಜಾಪುರ	- ಇಲ್ಲ -
13. ಕೋಲಾರ	- ಇಲ್ಲ -
14. ಮೈಸೂರು	- ಇಲ್ಲ -
15. ಬೆಂಗಳೂರು (ನಗರ)	- ಇಲ್ಲ -
16. ಬೆಂಗಳೂರು (ಗ್ರಾಂ)	45 ನಿವೇಶನಗಳಿಗೆ ಮನೆ ಕಟ್ಟಲು ಮಂಜೂರಾಗಿದ್ದು ಅವುಗಳಲ್ಲಿ 20 ಮನೆಗಳಲ್ಲಿ ಪಾಯಹಾಕಲಾಗಿದೆ.
17. ಹಾಸನ	- ಇಲ್ಲ -
18. ಮಂಡ್ಯ	- ಇಲ್ಲ -
19. ಧಾರವಾಡ	- ಇಲ್ಲ -
20. ಶಿವಮೊಗ್ಗ	1164 ನಿವೇಶನಗಳಲ್ಲಿ ಮನೆ

ಶ್ರೀ ಆರ್.ಎನ್. ನಾಯಕ್ : ಅಧ್ಯಕ್ಷರೇ, ಒದಗಿಸಿದ ಉತ್ತರದ 'ಇ' ನಲ್ಲಿ ಬೆಂಗಳೂರು ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕು ಗೊಟ್ಟಿಗೆರೆ ಗ್ರಾಮದ ಸರ್ವೇ ನಂಬರ್ 109 ಮತ್ತು 110 ಅರಣ್ಯ ಭೂಮಿಯಲ್ಲಿ 228 ನಿವೇಶನಗಳನ್ನು ಕೊಟ್ಟಿದ್ದು, ಅದನ್ನು ಜಿಲ್ಲಾಧಿಕಾರಿಗಳು ರದ್ದುಪಡಿಸಿದ್ದಾರೆಂದು ಹೇಳಿದ್ದಾರೆ. ಇದು ಅರಣ್ಯ ಭೂಮಿ ಆದ ಕಾರಣಕ್ಕಾಗಿ ರದ್ದುಪಡಿಸಿದರೋ ಅಥವಾ ಬೇರೆ ಕಾರಣಕ್ಕಾಗಿ ರದ್ದುಪಡಿಸಿದರೋ? ನೀವು ರದ್ದುಗೊಳಿಸುವುದಾದರೆ ಅದಕ್ಕೆ ಶಾಸಕರು ಅಧ್ಯಕ್ಷರು ಇರುತ್ತಾರೆ? ಶಾಸಕರು ಕೊಟ್ಟಿದ್ದನ್ನು ರದ್ದುಪಡಿಸುವುದಕ್ಕೆ ಡಿ.ಸಿ. ಯವರಿಗೆ ಯಾರು ಅಧಿಕಾರವನ್ನು ಕೊಟ್ಟರು. ನೀವು ಅಧಿಕಾರವನ್ನು ಕೊಟ್ಟಿದ್ದೀರಾ? ನೀವು ದಯವಿಟ್ಟು ತಿಳಿಸಬೇಕು. ಇದು ಮೊದಲನೇ ಪ್ರಶ್ನೆ. ಎರಡನೆಯದಾಗಿ ಒಟ್ಟು ನಮ್ಮ ರಾಜ್ಯದಲ್ಲಿ 5,80,580ನಿವೇಶನಗಳನ್ನು ಕೊಡಲಾಗಿದೆ, ಅದರಲ್ಲಿ ಗುಡ್ಡಗಾಡು ಜಿಲ್ಲೆ ಆಗಿರತಕ್ಕಂಥ ಉತ್ತರ ಕನ್ನಡ ಜಿಲ್ಲೆಯಲ್ಲಿ 12,155 ನಿವೇಶನಗಳನ್ನು ಅರಣ್ಯ ಭೂಮಿಯಲ್ಲಿ ಕೊಟ್ಟಿದ್ದಾರೆ. ಅರಣ್ಯ ಭೂಮಿಯಲ್ಲಿ ಕೊಟ್ಟ ಈ ಸೈಟುಗಳ ಸಂಖ್ಯೆ ಬಹಳ ಕಡಿಮೆ ಇದೆ. ಈ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸೈಟ್ ಕೊಡಲು ಭೂಮಿ ಸಿಗುತ್ತಿಲ್ಲ, ಆದ್ದರಿಂದ ಅರಣ್ಯ ಭೂಮಿಯಲ್ಲಿ ಕೊಡಲಾಗಿದೆ ಎಂದು ಹೇಳಿ ಈಗ ಅದನ್ನು ರದ್ದುಪಡಿಸಲಾಗಿದೆ ಎಂದು ಅವರು ಹೇಳುತ್ತಿದ್ದಾರೆ. ಹೀಗೆ ರದ್ದುಪಡಿಸಿರುವುದು ತಪ್ಪಾಗಿದೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿಸಲಿಕ್ಕೆ ನೀವು ಏನಾದರೂ ಪ್ರಯತ್ನ ಮಾಡುತ್ತೀರೋ ಹೇಗೆ? ಅಥವಾ ನೀವು ಏನು ಮಂತ್ರಿಯಾಗುವುದಕ್ಕೆ ಯಾವ ಸ್ಟೀಡಿನಲ್ಲಿದ್ದಿರಿ, ಆ ಸ್ಟೀಡು ಕೆಲಸ ಮಾಡುವುದರಲ್ಲಿ ಇಲ್ಲ ಅಂತ ನಾನು ಹೇಳುತ್ತೇನೆ. ಇದಕ್ಕೆ ತಾವೇನು ಹೇಳುತ್ತೀರಿ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಅರಣ್ಯ ಭೂಮಿಯನ್ನು ಆಶ್ರಯ ಯೋಜನೆಗೆ ತೆಗೆದುಕೊಂಡಿದ್ದು ನಿಜ. ನಾವು 17 ಸಾವಿರದ 95 ನಿವೇಶನಗಳನ್ನು ಕೊಟ್ಟಿದ್ದೇವೆ. ನಾವು ಕೊಡುವಾಗ ಅಂದಿನ ಮುಖ್ಯಮಂತ್ರಿಗಳು ಹೇಳಿದ್ದರು. ಅರಣ್ಯ ಭೂಮಿಯಲ್ಲಿ ಕೊಡಿ, ಮುಂದೆ

ಕೇಂದ್ರ ಸರ್ಕಾರದ ಅಪ್ಪಣೆಯನ್ನು ತೆಗೆದುಕೊಂಡು ನಾವು ರೆಗ್ಯೂಲರೈಜ್ ಮಾಡುತ್ತೇವೆಂದು ಭರವಸೆ ಮತ್ತು ವಿಶ್ವಾಸವನ್ನು ಅವತ್ತು ಕೊಟ್ಟಿದ್ದರು. ಆ ಪ್ರಕಾರ ಈಗಾಗಲೇ ಕೊಡಲಾಗಿದೆ. ಈಗ ಬೆಂಗಳೂರಿನಲ್ಲಿ ಸುಮಾರು 22 ಸೈಟುಗಳನ್ನು ರದ್ದು ಪಡಿಸಲಾಗಿದೆ ಎಂದು ಹೇಳಿದ್ದಾರೆ. ಸರ್ಕಾರದವರು ಇವತ್ತು ಇಂಥ ಒಂದು ಕ್ರಮವನ್ನು ತೆಗೆದುಕೊಳ್ಳಬಾರದೆಂದು, ಅವರಿಗೆ ರೆಗ್ಯೂಲರೈಜ್ ಮಾಡಿಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಒಂದು ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರದವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಈಗ ಕೇಂದ್ರ ಸರ್ಕಾರದವರು ಅದನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತು ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ. ಅದು ಬರುತ್ತದೆ. ನಾವು ಯಾರಿಗೂ ರದ್ದು ಮಾಡುವಂತಹ ವ್ಯವಸ್ಥೆಯನ್ನು ಮಾಡುವುದಿಲ್ಲ. ಕೊಟ್ಟಿದ್ದು ಕೊಟ್ಟ ಹಾಗೆ ಇದೆ, ಇನ್ನು ಮೇಲೆ ಅರಣ್ಯ ಜಮೀನನ್ನು ತೆಗೆದುಕೊಳ್ಳಬೇಕಾದರೆ ಕೇಂದ್ರ ಸರ್ಕಾರದ ಫಾರಸ್ಟ್ ಆಕ್ಟ್ ಪ್ರಕಾರ ನಾವು ಒಂದು ಎಕರೆ ತೆಗೆದುಕೊಂಡರೆ 4 ಎಕರೆ ಅವರಿಗೆ ಕೊಡಬೇಕಾಗುತ್ತದೆ. 20ಸಾವಿರ ರೂಪಾಯಿಗಳನ್ನು ಒಂದು ಹೆಕ್ಟರ್‌ಗೆ ಕೊಡಬೇಕಾಗುತ್ತದೆ. ಈ ಎಲ್ಲಾ ಉಪಯೋಗಗಳನ್ನು ನೋಡಿಕೊಂಡು ನಾವು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಆರ್.ಎನ್. ನಾಯಕ್ : ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಆಶ್ರಯ ಯೋಜನೆಗೆ ಕೊಡುವುದಕ್ಕೆ ಬೇರೆ ಭೂಮಿ ಇಲ್ಲ. ಬೇರೆ ಭೂಮಿ ಇಲ್ಲದಿದ್ದಾಗ ಯಾರು ಸೈಟು ಬಿಡುತ್ತಾರೋ ಅಂಥವರಿಗೆ ಸೈಟ್ ಕೊಡುವುದಕ್ಕೆ ಈ ಅರಣ್ಯ ಭೂಮಿಯನ್ನು ಅವಲಂಬಿಸಬೇಕಾಗುತ್ತದೆ. ಈ ಕಾರಣಕ್ಕಾಗಿ ಮಾನ್ಯ ಮಂತ್ರಿಗಳು ಆ ಅರಣ್ಯ ಭೂಮಿಯನ್ನು ಪಡೆಯುವುದಕ್ಕೆ ಕೇಂದ್ರ ಸರ್ಕಾರಕ್ಕೆ ಏನು ಬೇಡಿಕೆಗಳನ್ನು ಸಲ್ಲಿಸಿದ್ದಾರೆ? 17ಸಾವಿರ ಸೈಟುಗಳನ್ನು ಈಗ ಕೊಟ್ಟಿರುವುದನ್ನು ನಾವು ದಕ್ಕಿಸಿಕೊಳ್ಳುವುದಕ್ಕೆ ಅವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು. ಈಗ ಬೆಂಗಳೂರಿನಲ್ಲಿ ಏನು ಮಾಡಿದ್ದಾರೋ ಮತ್ತು ಯಾರು ಅಧ್ಯಕ್ಷರು ಇದ್ದರು ಮತ್ತು ಅದು ಏಕೆ ರದ್ದು ಮಾಡಿದ್ದಾರೆ, ಕಾರಣವೇನು? ಎಂಬ ಬಗ್ಗೆ ವಿವರಣೆಯನ್ನು ಕೊಟ್ಟಿಲ್ಲ. ಅದನ್ನು ಕೊಡಬೇಕು.

ಶ್ರೀ ಗೋಪಿನಾಥ್ ಆರ್ ಸಾಂಡ್ರಾ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಅರಣ್ಯ ಭೂಮಿ ಏನು ತೆಗೆದುಕೊಂಡಿದ್ದೇವೆ, ಅದನ್ನು ನಾವು ರೆಗ್ಯುಲರೈಸ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರೊಡನೆ ಪತ್ರ ವ್ಯವಹಾರ ಮಾಡಿದ್ದೇವೆ. ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಹೋಗಿ ಅನುಮತಿಯನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ ಇರುವವರನ್ನು ಕದಲಿಸುವುದೂ ಇಲ್ಲ, ಬದಲಿಸುವುದೂ ಇಲ್ಲ. ಅವರು ಇದ್ದಲ್ಲೇ ಇರುತ್ತಾರೆ. ಇನ್ನು ಮೇಲೆ ಮಾಡುವುದಕ್ಕೂ ಕೂಡ ನಾವು ಎಲ್ಲಿ ಜಮೀನು ಇಲ್ಲ ಅಲ್ಲಿ ಫಾರೆಸ್ಟ್ ಜಮೀನು ಬಿಟ್ಟು ಬೇರೆ ಜಮೀನು ಇಲ್ಲ, ಅಲ್ಲಿ ಅವರಿಗೆ ಪ್ರಸ್ತಾವನೆ ಕಳುಹಿಸಿ ಕೇಂದ್ರಸರ್ಕಾರದ ಅನುಮತಿ ತೆಗೆದುಕೊಂಡು ಅವರಿಗೆ ಸ್ಥಳವನ್ನು ಕೊಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಯಚೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗ ಮತ್ತು ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳ ಬಗ್ಗೆ

525 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯಲ್ಲಿ ಎಷ್ಟು ಹಿಂದುಳಿದ ಮತ್ತು ಹರಿಜನ ಗಿರಿಜನರ ವಿದ್ಯಾರ್ಥಿನಿಲಯಗಳಿವೆ?